ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ 36-2019

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

<u>ಸಾಕ್ಷಿಗೆ ದಿಃ **18.06.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿಪರಃ ಶ್ರೀ.V.R ವಕೀಲರಿಂದಃ</u>**

ನಾನು ಶ್ರೀ ರಂಗನಾಥ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಶಾಲೆಯಲ್ಲಿ ಕೆಲಸ ಮಾಡುವ ಬಗ್ಗೆ ಪೋಲಿಸರಿಗೆ ದಾಖಲೆ ನೀಡಿರುತ್ತೇನೆ. ದಿಃ 12.01.2019 ಕ್ಕೆ ಸಂಬಂಧಿಸಿದಂತೆ ನಾನು ಇನ್ನೂ ಕರ್ತವ್ಯದಲ್ಲೆದೆ. ನಾನು ಆ ದಿನ ಕರ್ತವ್ಯದಲ್ಲಿದ್ದ ಬಗ್ಗೆ ಮತ್ತು ಹಾಜರಾತಿಯ ಬಗ್ಗೆ ಪೋಲಿಸರಿಗೆ ದಾಖಲಾತಿ ನೀಡಿರುವುದಿಲ್ಲ. ಅಗತ್ಯ ಇದ್ದಲ್ಲಿ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ರಾಗಿ ಬಳೆ ಇದ್ದಜಮೀನು ಎಷ್ಟು ಎಕರೆ ಮತ್ತು ಯಾವ ಸರ್ವೆ ನಂ ಇರುತ್ತದೆಂದು ತೋರಿಸಲು ಪೋಲಿಸರಿಗೆ ದಾಖಲು ನೀಡಿರುವುದಿಲ್ಲ. ಸದರಿ ದಾಖಲೆ ಈಗಲೂ ಸಹ ಸಿಗುತ್ತದೆ ಅದನ್ನು ಈಗಲೂ ತಂದು ಕೊಡಬಹುದು ಎಂದರೆ ಸರಿ. ನೀವು ಸದರಿ ಜಮೀನಿನ ಮಾಲಿಕರು ಆಗಿರುವುದಿಲ್ಲ ಗಲಾಟೆ ಆದ ನಾನು ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿಯಲ್ಲ.

ಆರೋಪಿತರು ನನ್ನ ಅಣ್ಣ ಮತ್ತು ಅವರ ಮಕ್ಕಳು ಆಗಿರುತ್ತಾರೆ. ನಮ್ಮ ಮತ್ತು ಅವರ ನಡುವೆ ಭಾಗಾಂಶ ಆಗಿರುವುದಿಲ್ಲ. ಸಾಕ್ಷಿ ಮೌಖಿಕವಾಗಿ ಪಂಚಾಯಿತಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕಡೆ ಯಂದು ಮಾಡಿಕೊಂಡಿರುತ್ತೇವೆಂದು ಹೇಳುತ್ತಾರೆ. ಬಾಗಾಂಶದ ಬಗ್ಗೆ ಬರವಣಿಗೆ ರೂಪದಲ್ಲಿ ಯಾವುದೇ ದಾಖಲೆ ಆಗಿರುವುದಿಲ್ಲ. ಆರೋಪಿ 1 ಬಾಗಾಂಶ ಕೇಳಿದ್ದಕ್ಕೆ ನಾನು ಕೊಡುವುದಿಲ್ಲವೆಂದು ಹೇಳಿ ಅದೇ ವಿಚಾರಕ್ಕೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ಸದರಿ ಜಮೀನು ನನ್ನ ಜಮೀನು ಆದ ಕಾರಣ ನಾನು ಬಾಗಾಂಶ ನೀಡುವುದಿಲ್ಲವೆಂದು ಹೇಳಿರುತ್ತೇನೆಂದು ನುಡಿಯುತ್ತಾರೆ.

ನಾನು ಪಿ.ಯು.ಸಿ ಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ಯಾವುದು ಕೃತ್ಯ ನಡೆಯದಿದ್ದರೂ ಸಹ ಸುಳ್ಳು ಪಿರ್ಯಾದಿಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಗಿ ಬೆಳೆದು ಕಟಾವು ಮಾಡಿ ತುಂಬುತ್ತಿದ್ದಾಗ ಆರೋಪಿತರೆಲ್ಲರೂ ಬಂದು ಗಲಾಟೆ ಮಾಡಿರುತ್ತಾರೆಂದು ಹೇಳಿದ್ದು ಟ್ರಾಕ್ಟರ್ ನಂ ನನಗೆ ನೆನಪಿಲ್ಲ. ಸದರಿ ಟ್ರಾಕ್ಟರ್ ನ ಮಾಲಿಕರು ಹೆಚ್. ಜಿ. ಗಂಗಯ್ಯ ಅವರನ್ನು ಆಗಿರುತ್ತದೆಂದು ಹೇಳುತ್ತಾರೆ. ಸದರಿ ಟ್ರಾಕ್ಟರ್ ಅನ್ನು ಬಾಡಿಗೆಗೆ ಪಡೆದ ಬಗ್ಗೆ ದಾಖಲೆಗಳನ್ನು ನೀಡಿಲ್ಲವೆಂದರೆ ಸಾಕ್ಷಿ ಅವರು ನನ್ನ ಭಾವ ಮೈದುನ ಆಗಿದ್ದರಿಂದ ಬಾಡಿಗೆ ಪಡೆದಿಲ್ಲವೆಂದು ಹೇಳುತ್ತಾರೆ.

ನನ್ನ ಭಾವ ಮೈದುನ ಗಂಗಯ್ಯ ಅವರ ಹೆಸರಿಗೆ ಯಾವುದೇ ಟ್ರಾಕ್ಟರ್ ಇರುವುದಿಲ್ಲ ಮತ್ತು ಅವರು ಟ್ರಾಕ್ಟರ್ ಮಾಲಿಕರು ಆಗಿರುವುದಿಲ್ಲವೆಂದರೆ ಸರಿಯಲ್ಲ.ರಾಗಿ ಬೆಳೆ ಕಟಾವು ಮಾಡಿದು ಬಗ್ಗೆ ಪೋಲಿಸರು ಅದನ್ನು ಪಡೆದಿದ್ದರಾ ಎಂದರೆ ಸಾಕ್ಷಿ 2 ಪ್ರಕರಣಗಳು ಇದ್ದು ಮಾಗಡಿ ಪ್ರಕರಣದಲ್ಲಿ ನೀಡಿರುತ್ತೇನೆಂದು ಹೇಳುತ್ತಾರೆ. ನಾನು ಯಾವುದೇ ರಾಗಿ ಬೆಳೆ ಕಟಾವು ಮಾಡಿಲ್ಲ ಆ ದಿನ ಆರೋಪಿತರು ಬಂದು ಗಲಾಟೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ.

ಆರೋಪಿ 1 ಮತ್ತು 3 ಗಲಾಟೆ ಆದ ದಿನ ಸ್ಥಳಕ್ಕೆ ಬಂದಿರುವುದಿಲ್ಲವೆಂದರೆ ಸರಿಯಲ್ಲ. 1 ನೇ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ನಾನು ಬಾಗಾಂಶದ ವೈಶಮ್ಯ ಇಟ್ಟುಕೊಂಡು ಸುಳ್ಳು ದೂರನ್ನು ನೀಡಿದ್ದು ಆರೋಪಿತರು ಸ್ಥಳಕ್ಕೆ ಬಂದಿರುವುದಿಲ್ಲ ನನ್ನ ಹೆಂಡತಿಗೆ ಅವಮಾನ ಆಗುವ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿ 5 ಮತ್ತು 6 ಯಾವ ಕಲರ್ ನ ಚಪ್ಪಲಿಯಿಂದ ತುಳಿದಿರುತ್ತಾರೆಂದು ನಾನು ನೋಡಿರುವುದಿಲ್ಲ ಆದರೆ ಅವರು ಚಪ್ಪಲಿಯಿಂದ ತುಳಿದಿರುತ್ತಾರೆಂದು ಹೇಳುತ್ತಾರೆ. ನನ್ನ ಹೆಂಡತಿಯ ಸೀರೆ ಎಳೆದಿದ್ದರು ಎಂದು ಹೇಳಿದ್ದು ಅದರ ಬಣ್ಣ ಯಾವುದೆಂದು ನನಗೆ ಗೊತ್ತಿಲ್ಲ.

ಅಂತಹ ಯಾವುದಾದರೂ ಘಟನೆ ನಡೆದಿದ್ದಲ್ಲಿ ಪೋಲಿಸರಿಗೆ ಅವುಗಳನ್ನು ನೀಡುತ್ತಿದ್ದೇ ಮತ್ತು ಅವುಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದೆ ಯಾವುದೇ ಘಟನೆ ಆಗದೆ ಇರುವ ಕಾರಣ ಅವುಗಳನ್ನು ನೀಡಿಲ್ಲವೆಂದರೆ ಸರಿಯಲ್ಲ. ನನ್ನ ಹೇಳಿಕೆಗೂ ಮತ್ತು ದೂರಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸ್ವತ್ತಿನ ವಿಚಾರವಾಗಿ ದಾಯಾದಿ ಮತ್ಸರ ಇಟ್ಟುಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ಕುಣಿಗಲ್ ಮತ್ತು ಮಾಗಡಿ ಪೋಲಿಸರಿಗೆ ನೀಡಿದ್ದು ಆದ ಕಾರಣ ಆರೋಪಿ 2 ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಪ್ರಕರಣವನ್ನು ರಾಜಿ ಮಾಡಿಕೊಳ್ಳಲು ತಯಾರಿದ್ದು ನಾನು ದಾಯಾದಿ ಮತ್ಸರ ಇಟ್ಟುಕೊಂಡು ರಾಜಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಒಂದುವೇಳೆ ದಿಃ 12.01.2019 ರಂದು ಘಟನೆ ನಡೆದಿದ್ದಲ್ಲಿ ನಾನು ಅದೇ ದಿನ ದೂರನ್ನು ನೀಡುತ್ತಿದ್ದೇ ಬದಲಾಗಿ ನಾನು ದಿಃ 13.01.2019 ರಂದು ದೂರನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ನಾನು ಆಸ್ಪತ್ರೆ ಹೋಗಿ ಚಿಕಿತ್ಸೆ ಪಡೆದು ಮಾರನೇ ದಿನ ದೂರನ್ನ ನೀಡಿರುತ್ತೇನೆಂದು ಹೇಳುತ್ತಾರೆ. ಪೊ. ಠಾಣೆಗೂ ಮತ್ತು ಆಸ್ಪತ್ರೆಗೂ ಅರ್ಧ ಕೀ ಮೀ ಅಂತರ ಇದೆ ಎಂದರೆ ಸರಿ. ಒಂದು ವೇಳೆ ಅಂತಹ ಘಟನೆ ನಡೆದಿದ್ದಲ್ಲಿ ನಾನು ಅದೇ ದಿನವೇ ದೂರನ್ನು ನೀಡುತ್ತಿದ್ದೇ ದೂರನ್ನು ಸೃಷ್ಟಿ ಮಾಡಿರುವ ಕಾರಣ ಮಾರನೇ ದಿನ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.